

# ಲೆಹಂಗಾ ಶರ್ಟ್ ಟ್ರೆಂಡ್

ಲೆಹಂಗಾ ಯುವತಿಯರ ಮೆಚ್ಚಿನ ಉಡುಗೆ. ಲೆಹಂಗಾ ಸ್ಕರ್ಟ್ ಮೇಲೆ ಶರ್ಟ್ ಧರಿಸುವುದು ಈಗಿನ ಟ್ರೆಂಡ್. ಸಿನಿ ನಟಿಯರಿಂದ ವೈರಲ್ ಆದ ಈ ಉಡುಗೆ ಈಗ ಸಖತ್ ಸುದ್ದಿ ಮಾಡುತ್ತಿದೆ.

■ ಆಶಾ ಎಸ್. ಕುಲಕರ್ಣಿ

ಫ್ಯಾಷನ್ ಲೋಕದಲ್ಲಿ ಏನೇ ಹೊಸದು ಬಂದರೂ, ಅದು ಟ್ರೆಂಡಿಯಾಗುವುದು ಸರ್ವೇಸಾಮಾನ್ಯ. ಅದು ಉಡುಪೇ ಇರಲಿ, ಒಡವೆಯೇ ಇರಲಿ. ಅದರಲ್ಲೂ ಸೆಲೆಬ್ರಿಟಿಗಳು, ಸಿನಿಮಾ ತಾರೆಯರು ಧರಿಸಿರುವ ಉಡುಪುಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆದರೆ ಸಾಕು, ನಮ್ಮ ಮಹಿಳಾ ಮಣಿಗಳು ಅದನ್ನೇ ಅನುಸರಿಸಿ ತಾವೂ ಎಲ್ಲರರ ನಡುವೆ ಎದ್ದು ಕಾಣಬೇಕೆಂದು ಬಯಸುತ್ತಾರೆ. ಇಂತಹವರ ಕಣ್ಣು ಇದೀಗ ಲೆಹಂಗಾ ಶರ್ಟ್ ಮೇಲೆ ನೆಟ್ಟಿದೆ.

ಸಾಮಾನ್ಯವಾಗಿ ಮದುವೆ ರಿಸೆಪ್ಶನ್‌ನಂತಹ ಅದ್ದೂರಿ ಸಮಾರಂಭಗಳಿಗೆ ಗ್ರ್ಯಾಂಡಾಗಿರುವ ಲೆಹಂಗಾ ತೊಡುವುದು ಇತ್ತೀಚೆಗೆ ಫ್ಯಾಷನ್ ಆಗಿದೆ. ಅದರಲ್ಲೂ ಹ್ಯಾಂಡ್ ಎಂಬ್ರಾಡರಿಯಲ್ಲಿ ಮುತ್ತು ಹರಳುಗಳು, ಜರ್ದೋಸಿ ವರ್ಕ್, ವಿವಿಧ ವಿನ್ಯಾಸದ ಕಲರ್‌ಫುಲ್ ಕುಂದನ್‌ಗಳು ಹಾಗೂ ಸುಂದರ ವಿನ್ಯಾಸದ ಮಿರರ್‌ಗಳಿಂದ ಅಲಂಕರಿಸಿದ ಲೆಹಂಗಾ ತೊಡುವುದೆಂದರೆ ಯುವತಿಯರಿಗೆ ಎಲ್ಲಿಲ್ಲದ ಪ್ರೀತಿ. ರಿಚ್ ಲುಕ್ ನೀಡುವ ಲೆಹಂಗಾ ವಿನ್ಯಾಸಗಳು ಇದೀಗ ತರಹೇವಾರಿಯಾಗಿ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಅಂತಹವುಗಳನ್ನು ಈ ತರಹದ ವಿಶೇಷ ಸಮಾರಂಭಗಳಿಗೆ ಧರಿಸಬೇಕೆಂದು ಎಲ್ಲರೂ ಬಯಸುವುದು ಸಹಜ.